ಕರ್ನಾಟಕ ಸರ್ಕಾರವು ಬೆಲೆಗಳನ್ನು ಹತೋಟಿಯಲ್ಲಿಡಲು ಮತ್ತು ಕಡಿಮೆ ಮಾಡಲು ಸರ್ವ ಪ್ರಯತ್ನವನ್ನು ಮಾಡುತ್ತಿದೆ. ಸಾರ್ವಜನಿಕ ವಿತರಣೆಯಲ್ಲಿ ಹಂಚುವ ಆಹಾರ ಪದಾರ್ಥಗಳ ಪ್ರಮಾಣವು ೧೯೮೩ನೇ ವರ್ಷದಲ್ಲಿ ೧೯೮೧ ಮತ್ತು ೧೯೮೨ ವರ್ಷಕ್ಕಿಂತ ಹೆಚ್ಚಾಗಿರುವುದನ್ನು ಲಗತ್ತಿಸಿದ ಪಟ್ಟಿಯಲ್ಲಿ ನೋಡಬಹುದು. ಸದ್ಯ ಸಾರ್ವಜನಿಕ ವಿತರಣೆಯಲ್ಲಿ ೩೫,೦೦೦ ಮೆಟ್ರಿಕ್ ಟನ್ ಅಕ್ಕಿಯನ್ನು ಒಂದು ತಿಂಗಳಿಗೆ ಬಿಡುಗಡೆ ಮಾಡಲಾಗುತ್ತಿದೆ, ಆದರೆ ಭಾರತ ಸರ್ಕಾರದವರು ೨೦,೦೦೦ ಮೆಟ್ರಿಕ್ ಟನ್ ಅಕ್ಕಿಯನ್ನು ಮಾತ್ರ ತಿಂಗಳಿಗೆ ಬಿಡುಗಡೆ ಮಾಡುತ್ತಿದ್ದಾರೆ. ೧೯೮೩ನೇ ವರ್ಷದಲ್ಲಿ ಪಾಮಲಿನ್ ಎಣ್ಣೆಯ ಬಿಡುಗಡೆ ಸಾಕಷ್ಟು ಹೆಚ್ಚಾಗಿದೆ. ಬೆಂಗಳೂರು ನಗರದಲ್ಲಿ ಒಂದು ಕಾರ್ಡಿಗೆ ಒಂದು ತಿಂಗಳಿಗೆ ೪ ಕೆ.ಜಿ. ಪಾಮಲಿನ್ ಎಣ್ಣೆಯನ್ನು ಹಂಚಲಾಗುತ್ತಿದೆ. ಇದರಿಂದ ಕಡ್ಲೆಕಾಯಿ ಎಣ್ಣೆಯ ಬೆಲೆಯು ಕಡಿಮೆಯಾಗಲಿಕ್ಕೆ ಸಹಾಯಕವಾಗಿದೆ. ಈ ವೇಳೆಯಲ್ಲಿ ಸರ್ಕಾರವು ಅಗತ್ಯ ವಸ್ತುಗಳ ಕಾಯಿದೆ ಮೇರೆಗೆ ಕಾನೂನು ಕ್ರಮಗಳನ್ನು ಬಿಗಿಯಾಗಿ ತೆಗೆದುಕೊಂಡಿದೆ. ೧೯೮೩ನೇ ವರ್ಷದಲ್ಲಿ ಅಗತ್ಯ ವಸ್ತುಗಳ ಕಾಯಿದೆಗೆ ಅನುಸಾರವಾಗಿ ೩,೪೬೧ ದಾಳಿಗಳನ್ನು ಮಾಡಿ, ೫೫೪ ಜನರನ್ನು ಬಂಧಿಸಲಾಗಿದೆ. ೨೨೦ ಜನರ ಮೇಲೆ ಮೊಕದ್ದಮೆ ಹೂಡಲಾಗಿದೆ ಮತ್ತು ೬೫ ಜನರಿಗೆ ಶಿಕ್ಷೆವಿಧಿಸ ಲಾಗಿದೆ. ಈ ಪ್ರಕರಣಗಳಲ್ಲಿ ೪.೭೭ ಕೋಟಿ ರೂಪಾಯಿಗಳ ಅಗತ್ಯ ವಸ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಶ್ರೀ ಜೆ. ಡಿ. ಸೋಮಪ್ಪ.—ಮಾನ್ಯ ಮಂತ್ರಿಗಳ ಉತ್ತರವನ್ನು ಕೇಳಿದರೆ ನಮಗೆ ಅಕ್ಕಿ ಸಿಕ್ಕ ಹಾಗೆ ಆಯಿತು. ಬತ್ತದ ಸೀಮೆಯಲ್ಲಿಯೇ ಐದು ರೂಪಾಯಿಗಳಿಗೆ ಕೆ. ಜಿ.ಯಂತೆ ಅಕ್ಕಿ ವ್ಯಾಪಾರ ಮಾಡುತ್ತಿದ್ದಾರೆ.

(ix) ದಳಪತಿಗಳಿಗೆ ಕೊಡುವ ಸಂಬಳದ ವಿಳಂಬ

ಶ್ರೀ ಹನುಮಂತರಾವ್ ದೇಸಾಯಿ (ಹುಮ್ನಾಬಾದ್).—೧೯೭೬ರಲ್ಲಿ ಕಾನೂನು ಪ್ರಕಾರ ರಾಜ್ಯ ಸರ್ಕಾರದವರು ದಳಪತಿಗಳನ್ನು ಪ್ರತಿಯೊಂದು ಹಳ್ಳಿಯಲ್ಲಿಯೂ ನೇಮಕ ಮಾಡಿದರು. ಸುಮಾರು ೭–೮ ವರ್ಷಗಳಿಂದ ಅವರು ದಳಪತಿಗಳ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ಎಲ್ಲಾ ಹಳ್ಳಿಗಳಲ್ಲಿ ಇವರು ಶಾಂತಿಯನ್ನು ಕಾಪಾಡುವುದು, ರಾತ್ರಿಯೆಲ್ಲಾ ಹಳ್ಳಿಗಳಲ್ಲಿ ಗಸ್ತು ತಿರುಗಾಡುವುದು, ಏನಾದರೂ ಗೊಂದಲ ಇದ್ದರೆ ಪೋಲೀಸರಿಗೆ ರಿಪೋರ್ಟ್ ಮಾಡುವುದು ಮುಂತಾದ ಅನೇಕ ಕೆಲಸ ಕಾರ್ಯಗಳನ್ನು ನಿಷ್ಠೆಯಿಂದ ಅವರುಗಳು ಮಾಡುತ್ತಾ ಬಂದಿದ್ದಾರೆ. ಗುಲ್ಬರ್ಗ ಜಿಲ್ಲೆಯಲ್ಲಿ ಸುಮಾರು ೧,೫೦೦ ಜನ ದಳಪತಿಗಳು, ಬೀದರ್ ಜಿಲ್ಲೆಯಲ್ಲಿ ೬೦೦ ಜನ ದಳಪತಿಗಳು ಕೆಲಸ ಮಾಡುತ್ತಿದ್ದಾರೆ. ಅಂದಿನಿಂದ ಇಂದಿನವರೆಗೂ ಇವರುಗಳು ಕೆಲಸ ಮಾಡುತ್ತಾ ಬಂದಿದ್ದರೂ ಕೂಡ, ಹಿಂದಿನ ಸರ್ಕಾರಕ್ಕೆ ಇವರ ಸಂಬಳದ ಬಗ್ಗೆ ಮನವಿಯನ್ನು ಸಲ್ಲಿಸಿದ್ದರೂ ಕೂಡ ಅವರಿಗೆ ಯಾವ ಒಂದು ಅನುಕೂಲವನ್ನು ಮಾಡಲಿಲ್ಲ. ಈ ಒಂದು ದೃಷ್ಟಿಯಿಂದ ಇವತ್ತು ಅವರು ಸಂಬಳ ಇಲ್ಲದೆ ಮತ್ತು ಬೇರೆ ಸವಲತ್ತುಗಳು ಇಲ್ಲದೆ ಬಹಳತೊಂದರೆಗೆ ಒಳಪಟ್ಟಿದ್ದಾರೆ. ಅವರು ಒಂದು ರೀತಿಯಲ್ಲಿ " ಬಿನ್ ಪಗಾರ್ ಅಧಿಕಾರಿ " ಎನ್ನುವಹಾಗೆ ಕೆಲಸ ಮಾಡುತ್ತಿದ್ದಾರೆ. ಸಂಬಳ ಇಲ್ಲ ಅಧಿಕಾರ ಮಾತ್ರ ಇದೆ, ಈ ಪರಿಸ್ಥಿತಿಯಲ್ಲಿ ಅವರು ಇದ್ದಾರೆ. ಆದ್ದರಿಂದ ನಾನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ, ಅವರಿಗೆ ಏನು ಸಂಬಳ ಸವಲತ್ತುಗಳು ಸಲ್ಲಬೇಕೋ ಅದನ್ನು ಜಾಗ್ರತೆಯಾಗಿ ಅವರಿಗೆ ದೊರಕುವಂತೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ದಳಪತಿಗಳ ಪ್ರಶ್ನೆಯನ್ನು ಮಾನ್ಯ ಸದಸ್ಯರಾದ ಹನುಮಂತರಾವ್ ದೇಸಾಯಿಯವರು ಎತ್ತಿದ್ದಾರೆ. ಇದು ಬಹಳ ದಿವಸದಿಂದ ಇದ್ದಂಥ ಪ್ರಶ್ನೆ. ದಳಪತಿಗಳ ನೇಮಕಾತಿಯೇನೋ ಆಗಿ ಬಿಟ್ಟಿದೆ, ಮತ್ತು ಮೊದಲು ಇವರಿಗೆ ಯಾವ ಒಂದು ಸವಲತ್ತುಗಳು ದೊರೆಯುತ್ತಿದ್ದವೋ ಅವೂ ಸಹ ಈಗ ನಿಂತು ಹೋಗಿವೆ. ಆದರೂ ಸಹ ನಾವು ಅವರಿಂದ ಕೆಲಸವನ್ನು ತೆಗೆದುಕೊಳ್ಳುತ್ತಿದ್ದೇವೆ. ಅದಕ್ಕಾಗಿ ಇವರ ಬಗ್ಗೆ ಪುನರ್ ವ್ಯವಸ್ಥೆಯನ್ನು ಯಾವ ರೀತಿಯಾಗಿ ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರ ಬಹು ಬೇಗ ಒಂದು ತೀರ್ಮಾನ ಮಾಡುತ್ತದೆ.